ವಿವರದಲ್ಲೂ ಒಂದು ಸಂಖ್ಯೆ ಸಾಮಾನ್ಯವಾಗಿದೆ. ಆ ನಂಬರಿಗೆ ಆಗಾಗ ಕರೆಗಳು ಹೋಗಿವೆ. ಅದರ ಅರ್ಥ ಏನು ಗೊತ್ತೇ? ಅವರೊಳಗೆ ಮಿತ್ರತ್ವ ಇದೆ ಅಂತ! ಅದು ಯಾರ ಮೊಬೈಲ್ ಗೊತ್ತೇ? ವಸಂತ ಮುತ್ತಪ್ಪನದ್ದು! ಇವರೆಲ್ಲರೂ ಮುತ್ತಪ್ಪನ ಸ್ನೇಹಿತರು! ಅದರಿಂದಾಗಿ, ಪ್ರವೀಣನ ಸಾವಿನಲ್ಲಿ ತಮ್ಮಯ್ಯನ ಪಾತ್ರವಿಲ್ಲವೆನ್ನುವುದು ದಿಟವಾಯಿತು'.

'ಅಂದರೆ ನೀವು ಹೇಳುವುದೇನು?'

'ಪ್ರವೀಣನ ಮರಣ ಪತ್ರವನ್ನೊಮ್ಮೆ ಪರಿಶೀಲಿಸಿ. ಈ ಹೆಸರುಗಳು ಅಲ್ಲಿವೆ. ತಮ್ಮಯ್ಯನಿಗೆ ಹಣ ನೀಡಿದ್ದಾಗಿ ಪ್ರವೀಣನಿಗೆ ಹೇಳಿರುವ ಅವರ ಹೆಸರುಗಳು ಪತ್ರದಲ್ಲಿರುವುದು ಕೇವಲ ಕಾಕತಾಳೀಯವಾಗಿರಲಾರದು! ಇದರಿಂದ ನಾವೇನು ತರ್ಕಿಸಬಹುದು? ಹಾಗೆ ಹೇಳಲು ಅವರೆಲ್ಲರಿಗೆ ಯಾರೋ ಸೂಚಿಸಿರಬೇಕು! ಉದ್ದೇಶ? ಹಣ ಲಪಟಾಯಿಸಿದ ಆರೋಪ ತಮ್ಮಯ್ಯನ ಮೇಲೆ ಬರುವುದು!'

'ಹಾಗಿದ್ದರೆ ತಮ್ಮಯ್ಯ ಹಣ ಲಪಟಾಯಿಸಲಿಲ್ಲವೇ?'

'ಇಲ್ಲ! ಆದರೆ ಆತನ ಮೇಲೆ ಆರೋಪ ಬರುವಂತೆ ಮಾಡಲಾಗಿದೆ. ಡಿಸೋಜ, ತಮ್ಮಯ್ಯನಿಂದ ಒಂದು ವಿಷ್ಯ ತಿಳಿಯಬೇಕಾಗಿದೆ. ಪ್ರವೀಣ ಎಡಚನೇ?' ಡಿಸೋಜ ಕಂಬಿಯ ಹಿಂದೆ ಇದ್ದ ತಮ್ಮಯ್ಯನಲ್ಲಿ ಕೇಳಿದಾಗ, ಆತ ನಕಾರಾತ್ಮಕವಾಗಿ ಉತ್ತರಿಸಿದ. 'ಅಲ್ಲಿಗೆ ಕೊಡವ ಸಮಾಜದ ಕ್ಯಾಮೆರಾದ ದಿಕ್ಕು ಬದಲಿಸಿದ್ದು ಪ್ರವೀಣನಲ್ಲವೆಂದಾಯಿತು! ಬಿದ್ದಪ್ಪ, ನೀನು ತಂದ ಕ್ಯಾಮೆರಾ ಫೂಟೇಜ್ ಗಮನಿಸಿದೆಯಾ? ಆ ವ್ಯಕ್ತಿ ಕಾರಿನ ಬಾಗಿಲು ಹಾಕುವುದನ್ನು ನೋಡು. ಆತ ಎಡಚನೆಂಬುದು ಸ್ಪಷ್ಟ. ಮುತ್ತಪ್ಪ ಎಡಚನೆಂಬುದನ್ನು ನೀನು ಗಮನಿಸಿದ್ದೀಯಾ?' ನಾನು ಆ ದೃಶ್ಯಾವಳಿಯನ್ನೊಮ್ಮೆ ನೋಡಿದೆ. ಮುಸುಕು ಹಾಕಿದ ವ್ಯಕ್ತಿ ಎಡಗೈನಿಂದ ಬಾಗಿಲಿನ ಕದ ಹಾಕುತ್ತಿದ್ದ!

'ಹಾಗಿದ್ದರೆ ಸಿಸಿ ಕ್ಯಾಮೆರಾದ ದಿಕ್ಕು ಬದಲಿಸಿದ್ದು ಮುತ್ತಪ್ಪ! ಆತ ಯಾಕೆ ಹಾಗೆ ಮಾಡಿದ?' ಉದ್ಗಾರ ತೆಗೆದೆ ನಾನು.

'ಇನ್ನೊಂದು ವಿಚಾರ ನಿನ್ನೆ ಅರಿವಾಯಿತು. ತಿಮ್ಮರಾಜು ಮತ್ತು ಮುತ್ತಪ್ಪ ಮಿತ್ರರೆನ್ನುವುದನ್ನು ಅವರ ಕರೆ ವಿವರಗಳು ಸಾಬೀತು ಮಾಡಿದವು. ಪೊಲೀಸರನ್ನು ಕರೆಸುವುದಾಗಿ ಬೆದರಿಸಿದಾಗ ಆತ ಬಾಯಿಬಿಟ್ಟ. ಆತನ ಆ ಫ್ಲಾಟ್ ಖಾಲಿಯೇ ಇದೆ. ಅದನ್ನು ಎರಡು ದಿನಗಳಿಗೆ ತನಗೆ ಬೇಕೆಂದು ಮುತ್ತಪ್ಪ ಪಡೆದಿದ್ದನಂತೆ. ಯಾವತ್ತು ಗೊತ್ತೇ? ಪ್ರವೀಣ ಆತ್ಮಹತ್ಯೆ ಮಾಡಿಕೊಂಡ ಮತ್ತು ಅದರ ಹಿಂದಿನ ದಿನ. ಅದನ್ನು ಮುತ್ತಪ್ಪ ಏಕೆ ಪಡೆದುಕೊಂಡ?' ಕರಮಚಂದನ ಪ್ರಶ್ನೆಗೆ ನಾವ್ಯಾರೂ ಪ್ರತಿಯಾಡಲಿಲ್ಲ. ಕರಮಚಂದನೇ ಮುಂದುವರೆಸಿದ, 'ಆ ಮನೆಯ ಬಾಲ್ಕನಿಯ ಛಾವಣಿಯನ್ನು ನಾನು ಪರಿಶೀಲಿಸಿದೆ. ತುಸು ಕಷ್ಟ ಪಟ್ಟರೆ ಅದನ್ನು ಏರುವುದು ಕಠಿಣವಲ್ಲ. ಅಲ್ಲಿ ಛಾವಣಿಯ ಧೂಳಿನಲ್ಲಿ ಹೆಜ್ಜೆ ಗುರುತುಗಳು ಇದ್ದವು! ಅಂದರೆ ಅಲ್ಲಿ ವ್ಯಕ್ತಿಯೊಬ್ಬ ನಿಂತಿದ್ದು ಸ್ಪಷ್ಟ. ತಾನು ಇತ್ತೀಚೆಗೆ ಅದನ್ನು ಏರಿದ್ದೇ ಇಲ್ಲವೆಂದು ತಿಮ್ಮರಾಜು ಹೇಳಿದ'.

'ಅವು ಮುತ್ತಪ್ಪನ ಹೆಜ್ಜೆ ಗುರುತುಗಳೇ?' ಡಿಸೋಜನ ಪ್ರಶ್ನೆ. 'ಹೌದು. ಅದರ ಪಟ ನನ್ನಲ್ಲಿದೆ. ಅಲ್ಲಿ ನಿಂತು ಆತ ಏನು ಮಾಡುತ್ತಿದ್ದಿರಬಹುದು? ಅಲ್ಲಿ ನಿಂತರೆ ತಾರಸಿ ಸುಲಭವಾಗಿ ಎಟಕುತ್ತದೆ. ಪ್ರವೀಣ ತಾರಸಿಯಲ್ಲಿ ರಸ್ತೆಗೆ ಬೆನ್ನು ಹಾಕಿ ನಿಂತಿದ್ದ. ಆಗ ಮುತ್ತಪ್ಪ ನಿರಾಯಾಸವಾಗಿ ಆತನನ್ನು ಎಳೆದಿದ್ದಾನೆ. ಆತ ಹಿಮ್ಮುಖವಾಗಿ ಕೆಳಗೆ ಬೀಳಲೇಬೇಕು! ಪ್ರವೀಣನ ಎಡಭುಜಕ್ಕೆ ಗಾಯವಾಗಿದ್ದು ಅದರಿಂದಾಗಿ!'

'ಅಂದರೆ ಪ್ರವೀಣನನ್ನು ಕೊಂದವನು ಮುತ್ತಪ್ಪ?' 'ಸಂಶಯವಿಲ್ಲ! ಮುತ್ತಪ್ಪ ಪ್ರವೀಣನ ಗಿರಾಕಿಗಳಿಂದ ಹಣ ಲಪಟಾಯಿಸಿದ್ದಾನೆ. ತಾನು ಸಿಕ್ಕಿ ಬೀಳ್ತೀನಿ ಅಂತ ಪ್ರವೀಣನ ಕೊಲೆಗೆ ಸಂಚು ಹೂಡಿದ್ದಾನೆ. ಇನ್ನೊಂದು ಸಂಗತಿ ನನ್ನ ತಲೆ ಕೊರೆಯುತ್ತಿತ್ತು. ಪ್ರವೀಣನ ತಲೆಯ ಹಿಂಭಾಗ ಒಡೆದಿತ್ತು. ಅಂದರೆ ಆತ ಹಿಮ್ಮುಖವಾಗಿ ಬಿದ್ದಿರೋದು ಸ್ಪಷ್ಟ. ಆತ್ಮಹತ್ಯೆ ಮಾಡಿಕೊಳ್ಳುವವನು ಹಿಮ್ಮುಖವಾಗಿ ಜಿಗಿಯುವ ಸಾಧ್ಯತೆ ಕಡಿಮೆ.

